ರೀತಿಯಲ್ಲಿ ಆ ಕ್ಲಬ್‌ಗಳ ಮೇಲೆ ಕ್ರಮ ತೆಗೆದುಕೊಂಡು ನಿಲ್ಲಿಸಬೇಕೋ ಆ ಕೆಲಸವನ್ನು ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದಂತೆ ನಿರ್ದಿಷ್ಟವಾಗಿ ಇಂಥ ಕ್ಲಬ್ ಎಂದು ಹೆಸರು ಹೇಳಿ ವಿವರವನ್ನು ಕೊಡದಿದ್ದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

ವಿಷಯ: (ಈ) ಚುಂಚನಕಟ್ಟೆಯಲ್ಲಿರುವ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಕೊಡಬೇಕಾಗಿರುವ ಕಬ್ಬು ಪೂರೈಕೆ ಬಾಕಿಯ ಹಣದ ಬಗ್ಗೆ

ಶ್ರೀ ಹೆಚ್.ಸಿ. ಬಸವರಾಜ್(ಪಿರಿಯಾಪಟ್ಟಣ): ಮಾನ್ಯ ಅಧ್ಯಕ್ಷರೆ, ಚುಂಚನಕಟ್ಟೆಯಲ್ಲಿರುವ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಗೆ ಅಲ್ಲಿಯ ಸುತ್ತಮುತ್ತಲ ರೈತರು ಕಬ್ಬನ್ನು ಪೂರೈಕೆ ಮಾಡಿ ದೀರ್ಘಾವಧಿಯೇ ಆಗಿದ್ದರೂ ಇನ್ನು ಆ ರೈತರುಗಳಿಗೆ ಬಾಕಿ ಹಣವನ್ನು ಕೊಟ್ಟಿಲ್ಲ. ಆ ಕಾರ್ಖಾನೆಗೆ 6 ಕೋಟಿ ರೂಪಾಯಿಗಳ ಬ್ಯಾಂಕ್ ಗ್ಯಾರಂಟಿ ಕೊಟ್ಟಿದ್ದರೂ ಕೇವಲ ಎರಡು ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ. ರೈತರಿಗೆ ತಮಗೆ ಬರಬೇಕಾದ ಹಣ ಸಕ್ಕರೆ ಕಾರ್ಖಾನೆಯಿಂದ ಸಕಾಲಕ್ಕೆ ಬರದೇ ಸಾಲ ತೀರಿಸಲು ಕೂಡ ಆಗದ ಪರಿಸ್ಥಿತಿ ಬಂದಿರುವುದರಿಂದ ಹಲವಾರು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಅಧ್ಯಕ್ಷರು: ಇದಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡಲು ಸಂಬಂಧಪಟ್ಟ ಮಂತ್ರಿಗಳು ಈಗ ಮೇಲ್ಮನೆಯಲ್ಲಿದ್ದಾರೆ, ಸಾಧ್ಯವಾದರೆ ಅವರನ್ನು ಕರೆಸಿ ಉತ್ತರ ಕೊಡಿಸುತ್ತೇನೆ. ಈಗ ಆತ್ಮಾನಂದರವರು ಮಾತನಾಡಿ.

ವಿಷಯ: (ಉ) ಮೈಸೂರು ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಪಾವತಿ ಮಾಡಬೇಕಾಗಿರುವ ಕಬ್ಬು ಪೂರೈಕೆ ಹಣವನ್ನು ಕೊಡಿಸುವ ಬಗ್ಗೆ.

ಶ್ರೀ ಎಂ.ಎಸ್. ಆತ್ಮಾನಂದ(ಮಂಡ್ಯ): ಮಾನ್ಯ ಅಧ್ಯಕ್ಷರೆ, ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ರೈತರಿಗೆ ಪಾವತಿ ಮಾಡಬೇಕಾದ ಕಬ್ಬಿನ ಹಣವನ್ನು ನೀಡದಿರುವುದರಿಂದ ರೈತರು ಕೃಷಿ ಸಾಲವನ್ನು ಮರು ಪಾವತಿ ಮಾಡಲು ಸಾಧ್ಯವಾಗದಿರುವ ಬಗ್ಗೆ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರ ಗಮನ ಸೆಳೆಯುತ್ತೇನೆ.

+ ಶ್ರೀ ವಿ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೇ, ಮೈಸೂರು ಸಕ್ಕರೆ ಕಂಪನಿಯು 30-3-2001ರ ವರೆಗೆ 8,87,848 ಟನ್ ಕಬ್ಬನ್ನು ಅರೆದಿರುತ್ತದೆ. 6,48,231 ಕ್ವಿಂಟಾಲ್ ಸಕ್ಕರೆ ದಾಸ್ತಾನಿನಲ್ಲಿರುತ್ತದೆ. ಇಲ್ಲಿಯವರೆಗೆ ಲೆವಿ ಮತ್ತು ಮುಕ್ತ ಮಾರುಕಟ್ಟೆಯಲ್ಲಿ ಈ ಕೆಳಕಂಡಂತೆ ಸಕ್ಕರೆ ಮಾರಾಟವಾಗಿರುತ್ತದೆ.

ಏಪ್ರಿಲ್‌ನಿಂದ ಮಾರ್ಚ್ 30ರ ವರೆಗೆ (ಕ್ವಿಂಟಾಲ್‌ಗಳಲ್ಲಿ)

| | | | |
|---|---|---|---|
| ಮುಕ್ತ | 4,50,645 | - | ರೂ.59.25 ಕೋಟಿಗಳು |
| ಲೆವಿ | 2,77,388 | - | ರೂ.30.58 ಕೋಟಿಗಳು |